# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 282 (317) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಡಾ|| ತಳವಾರ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 15.02.2023 |
| ಉತ್ತರಿಸುವ ಸಚಿವರು | : | ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಜಿಲ್ಲಾ/ತಾಲ್ಲೂಕು ಕೇಂದ್ರಗಳಲ್ಲಿ ವಿಧಾನ ಪರಿಷತ್ ಸದಸ್ಯರು ಪ್ರವಾಸದ ಸಮಯದಲ್ಲಿ ಉಳಿದುಕೊಳ್ಳಲು ಇರುವ ಸೌಲಭ್ಯಗಳೇನು:</td><td>ರಾಜ್ಯದ ಲೋಕೋಪಯೋಗಿ ಇಲಾಖೆಯ ಎಲ್ಲಾ ವಲಯಗಳಡಿ ಬರುವ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಜನಪ್ರತಿನಿಧಿಗಳಿಗೆ (ಶಾಸಕರು, ಸಚಿವರು, ಲೋಕಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ತ ಸದಸ್ಯರು) ಹಾಗೂ ಗಣ್ಯ ವ್ಯಕ್ತಿಗಳಿಗೆ ಪ್ರವಾಸ ಸಮಯದಲ್ಲಿ ಉಳಿದುಕೊಳ್ಳಲು ವಿಐಪಿ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ವಿವಿಐಪಿ ಕೊಠಡಿಗಳ ಸೌಲಭ್ಯ ಕಲ್ಪಿಸಲಾಗಿರುತ್ತದೆ.</td></tr>
<tr><td>ಆ)</td><td>ಪ್ರವಾಸದ ಸಮಯದಲ್ಲಿ ಕೊಠಡಿಗಳು ಬೇಕೆಂದು ಪತ್ರ ನೀಡಿದಾಗ ಕೊಠಡಿಗಳು ಖಾಲಿ ಇಲ್ಲಾ ಎಂದು ಕಾರಣಗಳನ್ನು ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td rowspan="3">ಅಂತಹ ಪ್ರಕರಣಗಳ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ. ಒಂದು ವೇಳೆ ಅಂತಹ ಪ್ರಕರಣಗಳೇನಾದರೂ ಇದ್ದಲ್ಲಿ ಇಲಾಖೆಯ ಗಮನಕ್ಕೆ ಬಂದರೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.</td></tr>
<tr><td>ಇ)</td><td>ಗೆಸ್ಟ್ ಹೌಸ್‌ನಲ್ಲಿ ಉಳಿದುಕೊಂಡಾಗ ರಿಜಿಸ್ಟರ್ ಪುಸ್ತಕದಲ್ಲಿ ಹೆಸರು ನಮೂದಿಸಲು ಹಾಗೂ ಹಣ ಪಾವತಿಸಲು ರಸೀದಿ ಕೇಳಿದರೆ ಅವು ಇಲ್ಲಾ ಬೇರೆ ಆಫೀಸಿನಲ್ಲಿದೆ ಎಂದು ಹೇಳುತ್ತಿರುವುದು ಸಮಂಜಸವೇ: ಇದು ಸರ್ಕಾರದ ಗಮನಕ್ಕೆ ಬಂದಿದೆಯೇ:</td></tr>
<tr><td>ಈ)</td><td>ಜನಪ್ರತಿನಿಧಿಗಳಿಗೆ ಗೆಸ್ಟ್ ಹೌಸ್ ಸೌಲಭ್ಯ ನೀಡಲು ಅಧಿಕಾರಿಗಳು ಹಿಂದೇಟು ಹಾಕುವುದು ಅಲ್ಲಿಯ ನೌಕರರು ಹಣ ಪಡೆದು ರಸೀದಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಸೂಕ್ತ ಪರಿಹಾರಗಳೇನು?</td></tr>
</table>

(ಸಂಖ್ಯೆ: ಲೋಇ 06 ಬಿಎಲ್ ಕ್ಯೂ 2023)

**(ಸಿ.ಸಿ. ಪಾಟೀಲ)**
ಮಾನ್ಯ ಲೋಕೋಪಯೋಗಿ ಸಚಿವರು.